ತಮ್ಮದೇ ಆದಂಗೇ. ಯಾವಾಗ ಖರೀದಿ ಕೊಡ್ತಾರೋ ನೋಡಬೇಕು.' ಅನೇಕರು ಇವರು ಹೊಲ ಮಾರುವ ದಿನವನ್ನೆ ಕಾಯುತ್ತಿದ್ದರು. ಯಲ್ಲವ್ವನಿಗೆ ಮಾತ್ರ ಎಂತೆಂತಹ ಕಷ್ಟಗಳಲ್ಲಿಯೆ ತಾವು ಹೊಲ ಮಾರಲಿಲ್ಲ. ತಾನು, ತನ್ನ ಗಂಡ ಇದನ್ನು ಅಂಬಲಿ ಕುಡಿದು ಗಳಿಸಿದೆವು, ರೆಂಟೆ ಕುಂಟೆ ಹೊಡೆದು ಮಣಿಸಿದೆವು. ಉತ್ತಿದೆವು, ಬಿತ್ತಿದೆವು. ಬೆಳೆದವು. ಆದರೆ ಮಕ್ಕಳು ಇಷ್ಟು ದೊಡ್ಡವರಾದ ಮೇಲೆ ಮಾರುವುದೆ? ತನ್ನ ಮೂವರು ಮಕ್ಕಳು, ಬಸವರಾಜ, ಶಿವಾನಂದ ಮತ್ತು ಸಿದ್ದಪ್ಪರನ್ನು ನೋಡಿದರೆ ಹೆಮ್ಮೆ ಬರುವಂತಹವರು. ದೃಢಕಾಯರು. ಗುಡ್ಡಬೆಟ್ಟ ಕಿತ್ತು ಇಡಬಲ್ಲವರು. ಅವರಿದ್ದುಕೊಂಡು ಹೊಲ ಮಾರಿದಳು ಎನ್ನುವ ಹರಲಿಯನ್ನು ತಾನು ಹೊರಲೆ? ಆದರೆ ದೈವ ತನಗೆ ಯಾವಾಗಲೂ ಪ್ರತಿಕೂಲವಾಗಿಯೇ ಪರಿಣಮಿಸಿದೆ. ಬಸವರಾಜ ನಾಗರತ್ನಾಳನ್ನು ಮದುವೆಯಾಗಿ ಬಂದಾಗಿನಿಂದ ತನ್ನ ಮಗನಾಗಿಲ್ಲ. ಅವ್ವ ಅನ್ನಲಿಕ್ಕೆ ಸಹ ಹಿಂದೆ ಮುಂದೆ ನೋಡುತ್ತಾನೆ. ತುಂಬ ಚೆನ್ನಾಗಿ ದುಡಿಯುತ್ತಿದ್ದ ಶಿವಣ್ಣನಿಗೆ ಏನಾಯಿತೋ ಏನೋ? ಮಾಯಕ್ಕನ ಸೆಳವಿಗೆ ಸಿಕ್ಕು ಹೊಲಮನೆ ಮರೆತು ಅವಳ ಕನಸಿನಲ್ಲಿಯೆ ತಿರುಗುತ್ತಿದ್ದಾನೆ. ಅದಕ್ಕಾಗಿ ಕಾಲೇಜಿಗೆ ಹೊರಟಿದ್ದ ಸಿದ್ದಣ್ಣನನ್ನು ಕಾಲೇಜು ಬಿಡಿಸಿ ಹೊಲದ ಕೆಲಸಕ್ಕೆ ಹಚ್ಚಿದ್ದಳು. ಸಿದ್ದೂ ಸ್ವತ ಕಾಲೇಜನ್ನು ಯಾವಾಗ ಬಿಟ್ಟೇನೋ ಎಂದು ಕಾಯುತ್ತಿದ್ದ.

ಹೈಸ್ಕೂಲ್ ಮುಗಿಸಿ ಅವನು ಕಾಲೇಜು ಕಟ್ಟೆ ಹತ್ತಬೇಕೆಂದು ಆಸೆ ಪಟ್ಟಾಗ ಮನೆಯಲ್ಲಿ ದೊಡ್ಡ ರಾಮಾಯಣವಾಗಿತ್ತು. ಸಿದ್ದಣ್ಣ ಕಾಲೇಜು ಮುಗಿಸಿ, ನೌಕರಿಗೆ ಹತ್ತಿದರೆ ಮನೆತನ ಮುಂದೆ ಬರುವುದೆಂದು ಯಲ್ಲವ್ವ ಕೆಲವು ಹಿರಿಯರನ್ನು ಕೂಡಿಸಿಕೊಂಡು ಬಸವರಾಜ, ಶಿವಣ್ಣರಿಗೆ ತಿಳಿಹೇಳಲು ನೋಡಿದಳು. ಕೊಡಲಿ ನಾಟದಷ್ಟು ಕೊಬ್ಬು ತುಂಬಿಕೊಂಡಿರುವ ತಮ್ಮನನ್ನು ಕಾಲೇಜಿಗೆ ಕಳಿಸದೆ ಮಲಪ್ರಭಾ ಕಾಲುವೆಯ ಕಾಮಗಾರಿಗೆ ಕಳಿಸಬೇಕೆಂದು ಅಣ್ಣಂದಿರು ಕಡ್ಡಿ ಮುರಿದಂತೆ ಹೇಳಿದರು. ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಹೀಗೆಲ್ಲ ಅನ್ನಬಹುದೆ? ಅವಳೆಂದೂ ಯೋಚನೆ ಮಾಡಿರಲಿಲ್ಲ. ತಾಯಿಗೆ ನೋವಾಗುವುದೆಂದು ಅವರಿಗೆ ಅನಿಸಬೇಡವೆ?

'ಅಂವಗ ಸಾಲಿ ಕಲಿಸಾಕಿ ನಮಗೂ ಹಚ್ಚಬೇಕಿತ್ತಲ್ಲೊ ಆವಾಗ? ನಮ್ಮನ್ಯಾಗ ದನ ಕಾಯಾಕ, ಶಗಣಿ ಬಳ್ಯಾಕ ಕಳಿಸೀದಿ? ತಿಳೀಲಿಲ್ಲೇನ ನಿನಗ?' ಅವರ ಮಾತಿಗೆ ಯಲ್ಲವ್ವ ಏನು ಹೇಳಿಯಾಳು? 'ಅಲ್ರೊ, ನೀವು ಸಣ್ಣವರಿದ್ದಾಗ ಪರಿಸ್ಥಿತಿ ಹೆಂಗಿತ್ತು ಮರ್ತಬಿಟ್ರೇನು? ಆವಾಗ ತಿನ್ನಾಕ ಕೂಳ ಸಿಗ್ತಿರಲಿಲ್ಲ. ಅಂಥಾದ್ರಾಗ ನಿಮ್ಮನ್ನ ಸಾಲಿಗೆ ಕಳಿಸಬೇಕಾಗಿತ್ತೇನ? ಹೆಂಗ ವಿಚಾರ ಮಾಡ್ತೀರಿ? ಏನ ಕತಿ?'



'ಹೆಂಗ ಮಾತಾಡ್ತಾಳ ನೋಡ್ರಿ ನಿಮ್ಮವ್ವ? ಮೊದಲು ಆಕೀನ

## ಕಳೆದ ಸಂಚಿಕೆಯಲ್ಲಿ

ಒಳ್ಳೆಯ ಕೆಲಸಗಾರ ಎಂದು ಹೆಸರು ಪಡೆದಿದ್ದ ನಾಗಣ್ಣನಿಗೆ ಮದುವೆ ಗೊತ್ತಾಗುತ್ತದೆ. ಆದರೆ ಮದುವೆಗೆ ಇನ್ನು ಹದಿನೈದು ದಿನ ಇದೆ ಎನ್ನುವಾಗಲೇ ಸಂಬಂಧ ಮುರಿದುಬೀಳುತ್ತದೆ. ಇದಕ್ಕೆ ಕಾರಣ ಕೇಳಬೇಡಿ ಎಂದು ಹುಡುಗಿ ಮನೆಯವರು ಸ್ಪಷ್ಟವಾಗಿ ಹೇಳುತ್ತಾರೆ. ಮಳೆ ಹನಿಯಿಲ್ಲದೆ ಜನ ಕಂಗಾಲಾಗುತ್ತಾರೆ. ಸೂರ್ಯ ಕೆಂಡದ ಮಳೆಯನ್ನು ಸುರಿಸುತ್ತಲೆ ಇದ್ದ. ಜನ ಮಳೆಗಾಗಿ ಮಾದೇವನ ಮೊರೆ ಹೋಗುತ್ತಾರೆ. ಜನರ ಪಾಡು ಕಂಡು ಗಾಳಿ ಎಲ್ಲಿಂದಲೋ ಜೋರಾಗಿ ಬೀಸಲಾರಂಭಿಸುತ್ತದೆ. ಆದರೆ ಒಂದೆರಡು ಹನಿ ಬಿದ್ದದ್ದು ಬಿಟ್ಟರೆ ಮತ್ತೆ ಧಗೆಯೇ ಹೆಚ್ಚಾಯಿತು. ಬೆವರಿನ ಮಳೆಯೇ ಹರಿಯತೊಡಗಿ ಜನ ಶಪಿಸುವುದು ಹೆಚ್ಚಾಯಿತು.



ಕೇಳ್ರಿ? ಇನ್ನೂ ತಿಳಿದಿಲ್ಲೇನು, ಗೋರಿ ಸಮೀಪಾತು' ಬಸವರಾಜನ ಹೆಂಡತಿ ನಾಗರತ್ನ ಅತ್ತೆಗೆ ಅಂದು ಕಟ್ಟಿಕೊಂಡಳು. ಅತ್ತೆ ಒಂದು ಅಂದರೆ ಸೊಸೆ ನೂರು ಅನ್ನುವುದನ್ನು ಕಲಿತಿದ್ದಳು. ಯಲ್ಲವ್ವ ಸಿದ್ದುನನ್ನು ಕನ್ನಡ ಸಾಲಿ ಮಾಸ್ತರ್ ನೌಕರಿ ಬರುವ ತನಕ ಕಲಿಸುತ್ತೇನೆನ್ನುವುದು, ಮನೆಯಲ್ಲಿ ಜಗಳವಾಗುವುದು ಸಾಮಾನ್ಯವಾಗಿತ್ತು. ಬೆಂಕಿ ಆರುವುದು ಮತ್ತು ಆಗಾಗ ಹೊತ್ತಿಕೊಳ್ಳುವುದು ನಡೆದೇ ಇತ್ತು. ಅಂತಹ ಜಗಳದಲ್ಲಿಯೇ ಸಿದ್ದು ಅವ್ವನ ಬೆಂಬಲದಿಂದ ಬಸ್ ಪಾಸ್ ತೆಗೆಸಿಕೊಂಡು ಒಂದು ವರ್ಷ ಮಲ್ಲೂರಿನಿಂದ ಬೈಲಹೊಂಗಲಕ್ಕೆ ದಿನಾಲೂ ಕಾಲೇಜಿಗೆ ಹೋಗಿ ಬಂದು ಮಾಡಿದ. ಕಾಲೇಜಿನಲ್ಲಿ ಮಾಸ್ತರುಗಳು ಹೇಳಿದ್ದು ತಿಳಿಯುತ್ತಲೆ ಇರಲಿಲ್ಲ. ಯಾಕೆಂದರೆ ಇವನ ಹೊಟ್ಟೆ ಹಸಿದು ಚುರುಗುಟ್ಟುತ್ತಿತ್ತು. ನಿನ್ನೆ ಉಳಿದಿದ್ದ ಪಲ್ಲೆ ಹಚ್ಚಿಕೊಂಡು ವಾರದ ಹಿಂದಿನ ರೊಟ್ಟಿ ತಿಂದು ಹೋಗಬೇಕು. ಅದೂ ಮುಂಜಾನೆಯ ಹೊತ್ತಿಗೆ ಕಡಲ್ ಕಡಲ್ ಎಂದು ರೊಟ್ಟಿಯನ್ನು ಗಂಟಲಲ್ಲಿ ಇಳಿಸಬೇಕು. ಅಷ್ಟೊತ್ತಿಗೆ ಅತ್ತಿಗೆ ನಾಗರತ್ನಾ ಅವನಿಗೆ ಏನಾದರೊಂದು ಹಂಗಿಸುವಳು.

'ದ್ಯಾಮವ್ವನ ಕ್ವಾಣ ಆಗ್ಯಾನು, ಒಂದು ಕೊಡ ನೀರು ತರೂದಿಲ್ಲ. ಒಂದು ಹೊರಿ ಮೇವು ಹೊರೂದಿಲ್ಲ. ಬಿಟ್ಟಿ ಕೂಳು ಮಾತ್ರ ಬಿಡೂದಿಲ್ಲ.' ನಾಗರತ್ನಳ ಮುಂಜಮುಂಜಾನೆಯ ಆರತಿ ಯಾವಾಗಲೂ ಇದ್ದಿದ್ದೆ. ಅವ್ವನೂ ಹಾಸಿಗೆಯಲ್ಲಿ ಸುಮ್ಮನಿರಲಾರದೆ ವಟಗುಟ್ಟವಳು. 'ಎಲ್ಲಿಂದವ್ರೊ ಬಂದಿದ್ದು ಹೊಳ್ಳಿ ನಮಗs ಅನ್ನಲಾರದ್ದು ಅಂದು ಕಟ್ಟಿಕೋತಾವ್ರು. ಇದರ ಮಾರಿ ಬಕ್ಕಬಾರ್ಲೆ ಬೀಳ್ಲಿ.' ಅತ್ತೆ ಸಿಟ್ಟಿನಲ್ಲಿ ಸೊಸೆಯ ಮುಖವನ್ನು ನಾಯಿನರಿಗೆ, ಬೆಕ್ಕುಇಲಿಗೆ, ಕತ್ತೆಕಿರುಬಕ್ಕೆ ಹೋಲಿಸುವಳು. ಸೊಸೆ ಸುಮ್ಮನಿರುವವಳೆ? ಆಕೆ ಅತ್ತೆಯ ಮನಸ್ಸಿಗೆ ಹತ್ತುವಂತಹ ಮಾತು ಹೇಳಿ ಅತ್ತೆ ಮನೋಕ್ಲೇಶವನ್ನು ದ್ವಿಗುಣಗೊಳಿಸುವಳು.

ಸಿದ್ದಣ್ಣ ಅಂದು ಕಾಲೇಜಿಗೆ ಹೋಗದೆ ದನಗಳ ಸಗಣಿ ಉಚ್ಚೆ ಬಳಿಯಲು ಕುಳಿತ. ಗ್ವಾತದ ಗಡಿಗಿಯಲ್ಲಿ ಎತ್ತುಆಕಳುಗಳ ಉಚ್ಚೆ ತುಂಬಿಕೊಂಡು ಅದನ್ನು ಒಂದು ಕೈಯಲ್ಲಿ ಹಿಡಿದು ಮತ್ತೊಂದು ಕೈಯಿಂದ ತಲೆ ಮೇಲಿನ ಸೆಗಣಿ ಬುಟ್ಟಿ ಸರಿದೂಗಿಸುತ್ತ ಊರ ಹೊರಗಿನ ತಮ್ಮ ತಿಪ್ಪೆಗೆ ಒಗೆದು ಬಂದನು. ಮೊದಮೊದಲು ಗ್ವಾತದ ಗಡಿಗೆ ಮುಟ್ಟಲು ಅದೆಷ್ಟು ಹಿಂಜರಿಕೆ ಉಂಟಾಗುತ್ತಿತ್ತು. ಅದರ ಘಾಟು ವಾಸನೆ ಮೂಗಿಗೆ ಬಡಿಯುತ್ತಿತ್ತು. ತಿಪ್ಪೆಗೊಬ್ಬರದ ಮಹತ್ವವನ್ನು ಒಂದು ದಿನ ತಾಯಿ ತಿಳಿಸಿ ಹೇಳಿದಳು. ಅಂದಿನಿಂದ ಹೊಲಮನೆಯ ಕೆಲಸ ಬಗಸಿ ಅವನಿಗೂ ಇಷ್ಟವಾಗತೊಡಗಿದ್ದವು. ದನಗಳ ಹಕ್ಕಿ ಸ್ವಚ್ಛವಾಗಿದ್ದರೆ ದನಕರುಗಳಿಗೂ ತೃಪ್ತಿ ಎನಿಸೀತು. ದುಡಿಯುವ ಮಗ ಹೊಟ್ಟೆ ತುಂಬ ತಿನ್ನಲೆಂದು ಬಿಸಿ ಬಿಸಿ ರೊಟ್ಟಿ ಬಡಿದು ಕೊಡುತ್ತಿದ್ದಳು. ಒಂದೊಂದು ಸಲ ಯಲ್ಲವ್ವ ಕೈ ರೊಟ್ಟಿ ಮಾಡುತ್ತಿದ್ದಳು. ಅದರ ರುಚಿಯೇ ರುಚಿ. ಅವ್ವ ಮಾಡುವ ಅಡುಗೆಯ ರುಚಿ ಅತ್ತಿಗೆ ನಾಗರತ್ನ ಮಾಡುವಾಗ ಇರುವುದಿಲ್ಲ. ಆಕೆ ರುಚಿಕರವಾಗಿ ಮಾಡಿದರೂ ಏನಾದರೂ ಬೈಯದೆ ಊಟಕ್ಕೆ ನೀಡಿದ್ದು ಇಲ್ಲ. ಸಿದ್ದಣ್ಣನಿಗೆ ಯಾವಾಗಲೂ ಮನೆಯಲ್ಲಿಯೆ ಉಂಡ, ತಿಂದ ಅಭ್ಯಾಸವೇ ಹೊರತು ಹೊರಗೆ ಹೋಟೆಲಿಗೆ ಎಂದೂ ಹೋದವನಲ್ಲ. ಹೋಗಲು ಅವನ ಹತ್ತಿರ ಹಣವೂ ಇರುತ್ತಿರಲಿಲ್ಲ. ಸಿದ್ದು ಕಾಲೇಜಿಗೆ ಹೋಗುವಾಗ ಗೆಳೆಯರ ಜೊತೆ ಒಂದೆರಡು ಸಲ ಬೈಲಹೊಂಗಲ ತಾಲೂಕಾ ಆಫೀಸಿನ ಹತ್ತಿರವಿದ್ದ ಹೋಟೆಲಿನಲ್ಲಿ ಕಟ್‌ದೋಸೆ ಸವಿದಿದ್ದ. ಒಂದು ದೋಸೆಯಲ್ಲಿ ಅರ್ಧರ್ಧ ಮಾಡಿ ಎರಡು ತಟ್ಟೆಯಲ್ಲಿ ಆಲೂ ಪಲ್ಯೆ, ಚಟ್ನಿ ಜೊತೆಗೆ ತಿನ್ನುವುದು ಎಷ್ಟು ಸೊಗಸಾಗಿತ್ತು. ಅವರು ಎರಡು ಮೂರು ಸಲ ಹೋದಾಗ ಕಟ್‌ದೋಸೆಗೆ ಆರ್ಡರ್ ಮಾಡಿದ್ದರು. ಬೈಟೂ ಚಹಾ ಹೇಳಿದರೂ ಎರಡೂ ಕಪ್‌ಗಳಲ್ಲಿ ಚಹಾ ತುಂಬಿ ತುಳುಕುವಂತೆ ಕೊಡುತ್ತಿದ್ದರು.

ಒಂದು ಸಲ ಅವ್ವನನ್ನು ಕರೆದುಕೊಂಡು ಹೋಟೆಲಿಗೆ ಹೋಗಬೇಕೆಂಬ ಕನಸು ಸಿದ್ದಣ್ಣನಿಗೆ ಇದೆ. 'ಏಯ್ ಸಿದ್ದಪ್ಪ, ನಾ ನಿನಗೆ ಮೊದಲೆ ಹೇಳೇನಿ. ಹೋಟೇಲುಗಿಟೇಲು ಅಂತ ಗೆಳ್ಯಾರು ಜೋಡಿ ಹೋದಗೀದಿ? ಅದು ಯಾವಾಗಲೂ ಹಂಗ ಒಂದು ಸಲ ಹೋದ್ರ ಮತ್ತ ಮತ್ತ ಹೋಗಬೇಕು ಅಂತ ಅನ್ನಿಸ್ತದ. ಚಾದಂಗಡಿ, ತಂಬಾಕಿನ ಚಟಾ ಹತ್ತಿಸಿಕೊಂಡು ಹೊಲಮನಿ ಮಾರಿಕೊಂಡು ಹೋದವರು ಊರಾಗ ಬಾಳ ಮಂದಿ ಅದಾರ.' ಅವ್ವ ಬಹಳ ಸಲ ಎಚ್ಚರಿಕೆ ಕೊಟ್ಟಿದ್ದಳು.

(ಸಶೇಷ)